# ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಿತ್ತೂರ.

ಸಿ.ಸಿ.ಸಂಖ್ಯೆ 362/2022

| | | |
|---|---|---|
| ಸಾಕ್ಷಿದಾರರ ಹೆಸರು | ಶ್ರೀ ರಾಜಾ ನಾಯಕ | ಡಿ.ಡಬ್ಲ್ಯೂ 1 |
| ತಂದೆಯ ಹೆಸರು | ಫಕೀರಾ ನಾಯಕ | |
| ವಯಸ್ಸು | 33 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸಸ್ಥಳ | ಕಡ್ಡಿರಾಮಾಪೂರ ತಾಂಡಾ | |

ಪ್ರಮಾಣ ವಚನ ಬೋಧಿಸಲಾಯಿತು.

ದಿಃ 22.06.2026

**ಮುಖ್ಯ ವಿಚಾರಣೆಃಶ್ರೀ ಆರ್ ಡಿ ಬಿ ವಕೀಲರಿಂದಃ–**

ನನಗೆ ಪಿರ್ಯಾದಿದಾರರ ಪರಿಚಯ ಇರುವುದಿಲ್ಲ. ಸದರಿಯವರ ಬಳಿ ನಾನು ಯಾವುದೇ ಸಾಲವನ್ನು ಪಡೆದಿರುವುದಿಲ್ಲ. ಸದರಿಯವರ ಜೊತೆ ನಾನು ಯಾವುದೇ ವ್ಯವಹಾರ ಮಾಡಿರುವುದಿಲ್ಲ. ನಾನು ಸದರಿಯವರಿಗೆ ಯಾವುದೇ ಚೆಕ್ ಕೊಟ್ಟಿಲ್ಲ. ಸದರಿಯವರು ನಮ್ಮ ಊರಿಗೆ ಬಂದಿರುವುದಿಲ್ಲ. ನಿಪಿ–1 ಚೆಕ್ ನನ್ನದು, ಅದನ್ನು 2021 ರಲ್ಲಿ ದಾವಲಸಾಬ್ ಅಂಬಲಗಟ್ಟಿ ಎಂಬುವವರಿಗೆ ಕೊಟ್ಟಿದ್ದೆ. ನಾವು ಸದರಿಯವರ ಹೊಲಕ್ಕೆ ಕಬ್ಬು ಕಡಿಯಲು ಹೋಗಬೇಕೆಂದು ಕರಾರು ಮಾಡಿಕೊಂಡು ಪತ್ರ ಮಾಡಲಾಗಿತ್ತು. ಆದರೆ ಕೆಲಸಗಾರರು ಕೈ ಕೊಟ್ಟ ಕಾರಣ ಸದರಿ ಕರಾರಿನ ಪ್ರಕಾರ ಸದರಿಯವರ ಹೊಲದಲ್ಲಿ ಕಬ್ಬು

ಕಡಿಯಲು ಹೋಗಿರುವುದಿಲ್ಲ. ಸದರಿ ಸಮಯದಲ್ಲಿ ನಾನು ನಿಪಿ– 1 ನ್ನು ಕೊಟ್ಟಿದ್ದೆ. ನಂತರ ನಾನು ಮತ್ತು ಸದರಿ ದಾವುಲಸಾಬ್ ವ್ಯವಹಾರವನ್ನು ಬಗೆಹರಿಸಿಕೊಂಡಿರುತ್ತೇವೆ. ನಾನು ಸದರಿಯವರಿಗೆ ಹಣ ಪಾವತಿ ಮಾಡಿದಾಗ ಚೆಕನ್ನು ಮರಳಿ ಕೇಳಿದ್ದೆ, ಆದರೆ ಅದು ಮನೆ ಖಾಲಿ ಮಾಡುವಾಗ ಕಳೆದುಹೋಗಿದೆ ಎಂದು ಹೇಳಿದ್ದರು. ಆದರೆ ಕರಾರು ಪತ್ರವನ್ನು ಮಾತ್ರ ಮರಳಿ ಕೊಟ್ಟಿರುತ್ತಾರೆ. ಈ ದಿನ ನ್ಯಾಯಾಲಯಕ್ಕೆ ಕರಾರು ಪತ್ರವನ್ನು ಹಾಜರು ಪಡಿಸುತ್ತಿದ್ದೇನೆ. ಅದನ್ನು **ನಿಡಿ–1** ಎಂದು ಗುರುತಿಸಲಾಯಿತು. ಈಗ ಪಿರ್ಯಾದಿದಾರರ ಮೂಲಕ ಸದರಿ ಚೆಕನ್ನು ದುರುಪಯೋಗ ಪಡಿಸಿಕೊಂಡು ನನ್ನ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿರುತ್ತಾರೆ. ಆದ್ದರಿಂದ ಈ ಪ್ರಕರಣದಿಂದ ಖುಲಾಷೆ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**( ಪಿರ್ಯಾದಿ ಪರ ವಕೀಲರು ಗೈರು ಹಾಜರು ಇದ್ದ ಕಾರಣ ಪಾಟೀ ಸವಾಲಿಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಮಹಮ್ಮದ ಅಲಿ ನಾಯಕ)
ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಕಿತ್ತೂರ.